# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ವೃಷಭಾವತಿನಗರ ವಾರ್ಡ್–102,
3ನೇ ಮುಖ್ಯರಸ್ತೆ, ಬಿ.ಇ.ಎಮ್.ಎಲ್. ಲೇಔಟ್, ಬೆಂಗಳೂರು–79.

**ಸಂಖ್ಯೆ: ವಾ–102/ವಾ.ಸ./ಸಭಾನಡವಳಿ–20/2021–22** **ದಿನಾಂಕ: 17/07/2021**

**–:ಸಭೆಯ ನಡವಳಿಗಳು:–**

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 17/07/2021 ಶನಿವಾರದಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್–102 ವೃಷಭಾವತಿನಗರ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಜಿ.ಪ್ರಕಾಶ್ ಸಮಿತಿಯ ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

| | |
|---|---|
| **1** | ಶ್ರೀ. ಕೆ. ವಿಜಯ್ ಶೇಖರ್<br>ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್–102 |
| **2** | ಶ್ರೀ ಜಿ. ಪ್ರಕಾಶ್, ಕಾರ್ಯದರ್ಶಿ ಮತ್ತು ಸಂಚಾಲಕರು, ವಾರ್ಡ್ ಸಮಿತಿ ವಾ–102 ಹಾಗೂ ಸಹಾಯಕ ಅಭಿಯಂತರರು, ವಾರ್ಡ್–102. |
| **3** | ಶ್ರೀ ಜಿ.ಆರ್.ಗೋವಿಂದ ರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–102 |
| **4** | ಶ್ರೀ ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–102 |
| **5** | ಶ್ರೀ ದಿನೇಶ್ ಕೆ. ಹೆಚ್, ಕಾಮಗಾರಿ ಪರಿವಿಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| **6** | ಶ್ರೀ ಹರೀಶ್, ಟ್ಯಾಕ್ಸ್ ಇನ್ಸ್‌ಪೆಕ್ಟರ್, ವಾರ್ಡ್–102 |
| **7** | ಶ್ರೀ ಸುನೀಲ್ ಡಿ.ಎಮ್, ವಾರ್ಡ್ ಮಾರ್ಷಲ್, ವಾರ್ಡ್–102 |
| **8** | ಶ್ರೀ ಕೇಶವ ರೆಡ್ಡಿ, ಎ.ಎಸ್.ಐ. ಬಸವೇಶ್ವರ ಪೊಲೀಸ್ ಠಾಣೆ. |
| **9** | ಶ್ರೀ ರಘುನಾಥ್ ಸಿಂಗ್, ಪಿ.ಸಿ. ಬಸವೇಶ್ವರ ಪೊಲೀಸ್ ಠಾಣೆ. |
| **10** | ಶ್ರೀ ಶ್ರೀನಿವಾಸ್, ಎ.ಎಸ್.ಐ. ಕಾಮಾಕ್ಷೀಪಾಳ್ಯ ಪೊಲೀಸ್ ಠಾಣೆ. |
| **11** | ಶ್ರೀ ಹೇಮಂತ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| **12** | ಶ್ರೀ ದೇವರಾಜು, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| **13** | ಶ್ರೀ ಚಂದ್ರಪ್ಪ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| **14** | ಶ್ರೀಮತಿ ಪ್ರೇಮ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |

ಮು.ತಿ.ನೋ.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

1) **ಆರೋಗ್ಯ ವಿಭಾಗ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-102 ವೃಷಭಾವತಿನಗರದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
- ಶ್ರೀಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯ 200-250 ಜನರಿಗೆ ಮಾರುತಿ ಶಾಲೆ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಕೋವಿಡ್ ಪರೀಕ್ಷೆಗಳನ್ನು ಕೈಗೊಳ್ಳುತ್ತಿರುವುದಾಗಿ ತಿಳಿಸುತ್ತಾ, ಕಳೆದ 15 ದಿನಗಳಿಂದ ಕೋವಿಡ್ ಸೋಂಕಿತರ ಸಂಖ್ಯೆಯು ಇಳಿಕೆಯಾಗಿದ್ದು, 04 ಆಕ್ಟಿವ್ ಕೇಸ್‌ಗಳಿರುತ್ತವೆ ಅದರಲ್ಲಿ 04 ಜನರು ಹೋಮ್ ಐಸೋಲೇಷನ್ ಮತ್ತು ಯಾವುದೇ ಸಾವು ಸಂಭವಿಸಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.
- ಮುಂದುವರೆದು, ವಾರ್ಡ್ ವ್ಯಾಪ್ತಿಯ ಮಾರುತಿ ಶಾಲೆಯಲ್ಲಿ 45 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ನೀಡಲಾಗುತ್ತಿದ್ದು, 18 ವರ್ಷ ಮೇಲ್ಪಟ್ಟವರಿಗೆ ಮುಂದಿನ ದಿನಗಳಲ್ಲಿ ವ್ಯಾಕ್ಸಿನ್ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕೋವಿಡ್ 3 ನೇ ಅಲೆಯನ್ನು ತಡೆಯಲು ವಾರ್ಡ್ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳಿಗೆ ಸ್ಯಾನಿಟೈಜ್ ಮಾಡುವುದು, ಹೋಟೆಲ್ ಮತ್ತು ಸಮುದಾಯ ಭವನಗಳಲ್ಲಿ ಹಾಗೂ ಇನ್ನಿತರೆ ಜನಸಂದಣಿಯಿರುವ ಪ್ರದೇಶಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಹಾಗೂ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವಾರ್ಡ್ ಮಾರ್ಷಲ್ಸ್ ಹಾಗೂ ಆರೋಗ್ಯ ಪರಿವೀಕ್ಷಕರು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ಸೂಚಿಸಿದರು.

2) **ಅಭಿಯಂತರರ ವಿಭಾಗದ ಬಗ್ಗೆ:-**

- ಶ್ರೀ ಚಂದ್ರಪ್ಪ ಮತ್ತು ಶ್ರೀಮತಿ ಪ್ರೇಮ ಸದಸ್ಯರು ರವರು ಮಾತನಾಡುತ್ತಾ, ಮಾರುತಿನಗರದ 4ನೇ ಎಫ್, 4ನೇ ಎಲ್, 4ನೇ ಹೆಚ್ ಅಡ್ಡರಸ್ತೆಗಳಲ್ಲಿ ಹಾಗೂ ಗಂಗಣ್ಣ ಬಡಾವಣೆಯ ವ್ಯಾಪ್ತಿಯಲ್ಲಿ ಬೋರ್‌ವೆಲ್‌ಗಳು ದುಸ್ಥಿತಿಯಲ್ಲಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತುಂಬಾ ತೊಂದರೆಯುಂಟಾಗಿರುತ್ತದೆ. ಆದುದರಿಂದ ಸದರಿ ಬೋರ್‌ವೆಲ್‌ಗಳನ್ನು ದುರಸ್ಥಿಗೊಳಿಸುವಂತೆ ಸಭೆಯಲ್ಲಿ ಕೋರಿದರು.
- ಶ್ರೀ ಮುರುಳಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೋರ್‌ವೆಲ್ ವಿಭಾಗ ರವರು ಮಾತನಾಡುತ್ತಾ, ಬೋರ್‌ವೆಲ್‌ಗಳ ದುರಸ್ಥಿ ಬಿಲ್ ಬಾಕಿ ಇರುವುದರಿಂದ ಬಿಬಿಎಂಪಿ ವತಿಯಿಂದ ಹ್ಯಾಂಡ್‌ಓವರ್ ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸುತ್ತಾ, ಸದರಿ ಬೋರ್‌ವೆಲ್‌ಗಳಲ್ಲಿ ಈಲ್ಡ್ ವ್ಯಾಲ್ಯು ಕಡಿಮೆಯಿದ್ದು, ಅಂತರ್ಜಲದ ಮಟ್ಟ ಕುಸಿದಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
- ಸಾರ್ವಜನಿಕರ ಮನವಿ ಮೇರೆಗೆ ಎಲ್ಲಾ ಸದಸ್ಯರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸುವಂತೆ ಸಭೆಯಲ್ಲಿ ಕೋರಿದರು.
- ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡುತ್ತಾ, ಸದರಿ ವಿಷಯವಾಗಿ ಸನ್ಮಾನ್ಯ ಶ್ರೀಕೆ.ಗೋಪಾಲಯ್ಯ ಮಾನ್ಯ ಅಬಕಾರಿ ಸಚಿವರು ಹಾಗೂ ಮಹಾಲಕ್ಷ್ಮೀಪುರಂ ವಿಧಾನಸಭಾ ಕ್ಷೇತ್ರದ ಶಾಸಕರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲಾ ಕಟ್ಟಡದ ಪ್ರಗತಿ ಪರಿಶೀಲನಾ ಸಮಯದಲ್ಲಿ ಹಾಗೂ ವಾರ್ಡ್ ಪರಿವೀಕ್ಷಣೆಯ ಸಮಯದಲ್ಲಿ ಸದರಿ ಶಾಲೆಗೆ ಹೊಸದಾಗಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಹೆಚ್ಚಾಗಿದ್ದು ಹೆಚ್ಚುವರಿ ಕೊಠಡಿಗಳನ್ನು ವಿಧ್ಯಾರ್ಥಿಗಳ ಅನುಕೂಲಕ್ಕಾಗಿ ನಿರ್ಮಿಸುವುದು ಅತ್ಯಂತ ಅವಶ್ಯಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ತುರ್ತಾಗಿ ಸದರಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸೂಚಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯ 4ನೇ ಮುಖ್ಯರಸ್ತೆ ಬಿ.ಇ.ಎಮ್.ಎಲ್. ಬಡಾವಣೆಯ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಉದ್ಯಾನವನವನ್ನು ಮೇಲ್ದರ್ಜೆಗೆ ಅಭಿವೃದ್ಧಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.
- ಮುಂದುವರೆದು, ಸ್ಥಳೀಯ ಸಾರ್ವಜನಿಕರ ಕೋರಿಕೆಯಂತೆ ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಹೊಸದಾಗಿ 10 ಕೊಳವೆ ಬಾವಿಗಳನ್ನು ಕೊರೆಯಿಸಲು ಹಾಗೂ ಮಳೆಗಾಲ ಪ್ರಾರಂಭವಾಗಿರುವುದರಿಂದ ಕೆಲವು ರಸ್ತೆಗಳು ಹದಗೆಟ್ಟಿದ್ದು, ಚರಂಡಿಗಳಲ್ಲಿ ಹೂಳು ತುಂಬಿಕೊಂಡಿರುತ್ತದೆ. ಆದುದರಿಂದ ಈ ಕೆಳಕಂಡ ಅತ್ಯಂತ ಅವಶ್ಯ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸನ್ಮಾನ್ಯ ಶ್ರೀಕೆ.ಗೋಪಾಲಯ್ಯ, ಅಬಕಾರಿ ಸಚಿವರು ಹಾಗೂ ಮಹಾಲಕ್ಷ್ಮೀಪುರಂ ವಿಧಾನಸಭಾ ಕ್ಷೇತ್ರದ ಶಾಸಕರು

ಮು.ತಿ.ನೋ.

ಸೂಚಿಸಿರುತ್ತಾರೆ. ಅದರಂತೆ ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಹಾಗೂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲಭ್ಯವಿರುವ ಅನುದಾನದಡಿಯಲ್ಲಿ ತುರ್ತಾಗಿ ಕೈಗೊಳ್ಳುವಂತೆ ಸೂಚಿಸಿದರು. ಅದರಂತೆ ವಾರ್ಡ್ ಸಮಿತಿ ಸಭೆಯ ಮುಂದೆ ಕೆಳಕಂಡ ಕಾಮಗಾರಿಗಳ ಪಟ್ಟಿಯನ್ನು ಮಂಡಿಸಲಾಯಿತು.

| Sl. No. | Name of Works | Amount in Lakhs |
|---|---|---|
| 1 | Providing Smart School Equipents to Govt School Building and Other Allied Works to Govt School at NGOs Colony In Ward No.102 Vrushabhavathinagara. | 250.00 |
| 2 | Construction of Additional Class Rooms to Govt High School Building and other Allied Works to Govt High School at NGO's Colony In Ward No:102 Vrushabhavathinagara (Phase - 2). | 250.00 |
| 3 | Construction of Additional Class Rooms and Development Works to CC TV Control Room and other Allied Works @ Govt School Premises In Ward No 102 Vrushabhavathinagara. (Phase - 2). | 250.00 |
| 4 | Construction of Additional Class Rooms Above Prarthana Mandira and other Allied Works to Govt School Premises @ Ngos Colony In Ward No 102 Vrushabhavathinagara. | 250.00 |
| 5 | Providing Tensile Roof and other Development Works to Sri Sri Sri Balaganghadharanatha Swamiji Park @ BEML layout In Ward No:102 Vrushabhavathinagara. | 200.00 |
| 6 | Improvements of Roads and Drains @ Ngos Colony and Sannakki Bayalu In Ward No.102 Vrushabhavathinagara. | 75.00 |
| 7 | Improvements of Roads and Drains @ Maruthinagara and Vinayakanagara In Ward No.102 Vrushabhavathinagara. | 70.00 |
| 8 | Improvements of Roads and Drains @ Bhadrappa Layout In Ward No.102 Vrushabhavathinagara. | 85.00 |
| 9 | Improvements of Roads and Drains @ Andanappa Layout and Kamakshipalya In Ward No.102 Vrushabhavathinagara. | 70.00 |
| 10 | Drilling of Borewells and Providing Pipeline in Maruthi Nagara, Vinayakanagara in Ward No. 102 Vrushabhavathinagara. | 55.00 |
| 11 | Drilling of Borewells and Providing Pipeline in Ward No. 102 Vrushabhavathinagara. | 60.00 |
| 12 | Improvements to Roads and Desilting of Drains at Ward Limits in Ward No. 102 Vrushabhavathi Nagara. | 35.00 |
| 13 | Emergency Works for Ward Maintenance in Ward No. 102 Vrushabhavathi Nagara. | 25.00 |
| 14 | Construction of BBMP Office Complex Building in Ward No. 102 Vrushabhavathi Nagara. | 250.00 |
| | **Grand Total** | **1925.00** |

ಅದರಂತೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳೊಂದಿಗೆ ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಈ ಮೇಲ್ಕಂಡ ಕಾಮಗಾರಿಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದು, ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

ಮು.ತಿ.ನೋ.

3) **ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-**

- ಶ್ರೀ ಹೇಮಂತ್ ಸದಸ್ಯರು ರವರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ಚರ್ಚಿಸಿದಂತೆ ಎನ್.ಜಿ.ಓ.'ಎಸ್ ಕಾಲೋನಿಯ 3ನೇ ಮುಖ್ಯರಸ್ತೆಯಲ್ಲಿರುವ ಖಾಲಿ ಜಾಗದಲ್ಲಿ ಕಸವನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಮತ್ತು ಎನ್.ಜಿ.ಓ.'ಎಸ್ ಕಾಲೋನಿಯ ರಸ್ತೆಗಳಲ್ಲಿ ಕಸವನ್ನು ಗುಡಿಸುತ್ತಿರುವುದಿಲ್ಲ ಹಾಗೂ ಜಗದ್ಗುರು ಶಾಲೆಯ ರಸ್ತೆ ಬದಿಯಲ್ಲಿರುವ ಕಸ ಮತ್ತು ಮರದ ಶೀಟ್‌ಗಳನ್ನು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ ಖಾಲಿ ನಿವೇಶನಗಳಲ್ಲಿರುವ ಕಸ ತೆರವುಗೊಳಿಸುವಂತೆ ಸಭೆಯಲ್ಲಿ ಕೋರಿದರು.
- ಶ್ರೀಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ಸದರಿ ಸ್ಥಳಗಳನ್ನು ಗುರುತಿಸಿ ಶೀಘ್ರವಾಗಿ ಸೂಕ್ತ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿ ರವರು ಮಾತನಾಡುತ್ತಾ, ಶೀಘ್ರವಾಗಿ ಬಗೆಹರಿಸಿ ಮುಂದಿನ ಸಭೆಯಲ್ಲಿ ವರದಿ ಮಾಡುವಂತೆ ಸಭೆಯಲ್ಲಿ ಸೂಚಿಸಿದರು.

4) **ಕಂದಾಯ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್‌ನಲ್ಲಿ ಕಂದಾಯ ವಸೂಲಿ ಮಾಡಲು ತೆಗೆದುಕೊಂಡಿರುವ ಸೂಕ್ತ ಕ್ರಮಗಳ ಬಗ್ಗೆ ವರದಿಗಳನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ತೆರಿಗೆ ಪರಿವೀಕ್ಷಕರಿಗೆ ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ ಹರೀಶ್, ಟ್ಯಾಕ್ಸ್ ಇನ್ಸ್‌ಪೆಕ್ಟರ್ ವಾರ್ಡ್-102 ರವರು ಮಾತನಾಡುತ್ತಾ, ಈವರೆಗೂ ವಾರ್ಡ್‌ನಲ್ಲಿನ ಸಾರ್ವಜನಿಕರು ಸರಿಯಾದ ರೀತಿಯಲ್ಲಿ ಬಾಕಿ ಹಾಗೂ ಪ್ರಸ್ತುತ ಸಾಲಿನ ತೆರಿಗೆಯನ್ನು ಪಾವತಿ ಮಾಡುತ್ತಿರುತ್ತಾರೆ. ಹಾಗೂ ತೆರಿಗೆ ಪಾವತಿಸದ ಕೆಲವು ಮಾಲೀಕರಿಗೆ ನೋಟೀಸ್ ಜಾರಿ ಮಾಡುವುದಾಗಿ ಸಭೆಗೆ ತಿಳಿಸಿದರು.

5) **ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-**

- ಶ್ರೀ ಹೇಮಂತ್ ಸದಸ್ಯರು ರವರು ಮಾತನಾಡುತ್ತಾ, 3ನೇ ಮುಖ್ಯರಸ್ತೆ ಎನ್.ಜಿ.ಓ.'ಎಸ್ ಕಾಲೋನಿಯಲ್ಲಿ ಮ್ಯಾನ್‌ಹೋಲ್‌ಗಳನ್ನು ರಸ್ತೆಯ ಮಟ್ಟಕ್ಕೆ ಎತ್ತರಿಸುವಂತೆ ಸಭೆಯಲ್ಲಿ ಕೋರಿದರು.
- ಶ್ರೀ ದಿನೇಶ್ ಕಾಮಗಾರಿ ಪರಿವೀಕ್ಷಕರು ಬಿಡಬ್ಲ್ಯೂಎಸ್‌ಎಸ್‌ಬಿ ರವರು ಮಾತನಾಡುತ್ತಾ, ಪ್ರಸ್ತುತವಾಗಿ ಕಾರ್ಮಿಕರ ಅಭಾವವಿರುವುದರಿಂದ ಸದರಿ ಕೆಲಸವನ್ನು ಶೀಘ್ರವಾಗಿ ಬಗೆಹರಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀ ದೇವರಾಜು ಸದಸ್ಯರು ರವರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ತಿಳಿಸಿದಂತೆ ಎನ್.ಜಿ.ಓ.'ಎಸ್ ಕಾಲೋನಿಯ 1ನೇ ಮುಖ್ಯರಸ್ತೆಯ ತಿಮ್ಮಯ್ಯ ರವರ ಮನೆಯ ಹತ್ತಿರ ಕುಡಿಯುವ ನೀರಿನ ಸಮಸ್ಯೆಯಿದ್ದು ಅದನ್ನು ಬಗೆಹರಿಸಿಕೊಡುವಂತೆ ಸಭೆಯಲ್ಲಿ ಕೋರಿದರು.
- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಸದರಿ ದೂರಿಗೆ ಸಂಬಂಧಿಸಿದಂತೆ ಶೀಘ್ರವಾಗಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಂಡು ಸಮಸ್ಯೆ ಬಗೆಹರಿಸಿ ವರದಿ ಮಾಡುವಂತೆ ತಿಳಿಸಿದರು.
- ಶ್ರೀಕೆ.ಹೆಚ್.ದಿನೇಶ್, ಕಾಮಗಾರಿ ಪರಿವೀಕ್ಷಕರು ರವರು ಮಾತನಾಡುತ್ತಾ, ಸದರಿ ದೂರುಗಳ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿ ದೂರುಗಳ ಅನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಭೆಗೆ ತಿಳಿಸಿದರು.

6) **ಪೊಲೀಸ್ ವಿಭಾಗದ ಬಗ್ಗೆ:-**

- ಶ್ರೀಮತಿ ಪ್ರೇಮ ಸದಸ್ಯರು ರವರು ಮಾತನಾಡುತ್ತಾ, 11ನೇ ಮುಖ್ಯರಸ್ತೆ (ಮಾರ್ಕೆಟ್ ರಸ್ತೆ) ಯಲ್ಲಿ ದುಷ್ಕರ್ಮಿಗಳು ಬೆಳಗಿನ ಜಾವದಲ್ಲಿ ತಳ್ಳುವ ಗಾಡಿಗಳನ್ನು ಕದಿಯುವುದು ಹಾಗೂ ಸಾಮಾಗ್ರಿಗಳನ್ನು ಕದಿಯಲು ಪ್ರಯತ್ನಿಸುತ್ತಿರುತ್ತಾರೆ. ಮತ್ತು ಅಮರವಾಣಿ ಶಾಲೆ ಹಾಗೂ ಮ್ಯಾಕ್ಸ್‌ಮುಲ್ಲರ್ಸ್ ಶಾಲೆಯ ಬಳಿ ಪೋಲಿ ಹುಡುಗರು ಹಾಗೂ ಗಾಂಜಾ ವ್ಯಸನಿಗಳ ಹಾವಳಿ ಹೆಚ್ಚಾಗಿರುವುದಾಗಿ ಸಭೆಯಲ್ಲಿ ದೂರಿದರು.
- ಶ್ರೀ ಕೇಶವ ರೆಡ್ಡಿ ಎ.ಎಸ್.ಐ. ಬಸವೇಶ್ವರನಗರ ಪೊಲೀಸ್ ಠಾಣೆ ಮತ್ತು ಶ್ರೀ ಶ್ರೀನಿವಾಸ್ ಎ.ಎಸ್.ಐ. ಕಾಮಾಕ್ಷೀಪಾಳ್ಯ ಪೊಲೀಸ್ ಠಾಣೆ ರವರು ಮಾತನಾಡುತ್ತಾ, ಸದರಿ ರಸ್ತೆಗಳಲ್ಲಿ ರಾತ್ರಿ ಹಾಗೂ ಬೆಳಗಿನ ಜಾವದಲ್ಲಿ ಹೆಚ್ಚಾಗಿ ಗಸ್ತು ತಿರುಗುವಂತೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ **ವಾರ್ಡ್ ಕಮಿಟಿ ವಾರ್ಡ್–102 ವಾಟ್ಸ್ ಆಪ್ ಗ್ರೂಪ್** ನಲ್ಲಿ ಮತ್ತು ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ–102

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್–102

<u>ಪ್ರತಿಯನ್ನು</u>

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## W-102 ವೃಷಭಾವತಿ ನಗರ

ದಿನಾಂಕ: 17/07/2021 ವೇಳೆಗೆ= 10.00 ಗಂಟೆಗೆ

ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ RWA's ಸದಸ್ಯರುಗಳ ಹಾಜರಾತಿ

| ಕ್ರಮ ಸಂಖ್ಯೆ | ಹೆಸರು | ಪದನಾಮ | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 1) | ಕೆ. ವಿಜಯಶೇಖರ್ | ನೋಡಲ್ ಆಫೀಸರ್ | 9448670084 | [signature] 17/7/2021 |
| 2) | ಪ್ರಕಾಶ್. ಜಿ | ಕಿರಿಯ ಇ ಪಾರ್ಕ್, W-102 | 9845236847 | [signature] 17/7/2021 |
| 3) | ರಂಗನಾಥ್. H | AEE, Nagapura | 9480685316 | |
| 4) | ಗೋವಿಂದರಾಜು | SHI | 9845512187 | G. I. [signature] |
| 5) | ಬಾಬು | JHI | 9632549664 | S. Babu. |
| 6) | ಮಂಜುನಾಥ್.ಬಿ.ಆರ್ | T.I | 9743557879 | |
| 7) | ಸಿದ್ದರಾಜು | AE, Bescom | 9449870177 | |
| 8) | ಶೇಖರ್ ನಾಯಕ್ | AE, BWSSB | 984544074 | [signature] |
| 9) | ಲೋಕೇಶ್ | Veterinary | 9480683056 | |
| 10) | ವಿನೋದ್ | Marshal W-102 | 9663084662 | |
| 11) | ಹೇಮಂತ್ ಕುಮಾರ್ | RWA's | 9448362208 | [signature] |
| 12) | ಪ್ರೇಮ | -\|\|- | 9632728915 | Prema |
| 13) | ಸಿದ್ದಗಂಗಮ್ಮ | -\|\|- | 990239918 | |
| 14) | ಗೌರಮ್ಮ | -\|\|- | 9740249333 | |

| | | | | |
|---|---|---|---|---|
| 15) | ರಾಜ್‌ಕುಮಾರ್ | RWA's | 8553779344 | |
| 16) | ಚಾಂದ್ರಪ್ಪ | —॥— | 9845763281 | [signature] |
| 17) | ದೇವರಾಜು | —॥— | 9632584986 | |
| 18) | ಸುನೀಲ್. D.M | Marshal, W-102 | 8748066616 | [signature] |
| 19 | [illegible] ASI | ಬಸವೇಶ್ವರನಗರ PS | 9035499942 | [signature] ASI |
| 14 | ದೇವರಾಜು | ಸದಸ್ಯರು | 9632584986 | [signature] |
| 15 | ಕೆ.ಆರ್. [illegible] ಸಿಂಗ್ | — | 8970172562 | [signature] |
| 16. | ವಿ.ಎನ್.ಮುರಳಿ. | | 9449671328<br>9141364401 | V.N. [signature] |
| 17 | ಶ್ರೀನಿವಾಸ್ ASI | ಕಾಮಾಕ್ಷಿಪಾಳ್ಯ P.S | 9900076861 | [signature] M ASI |
| | | | | |
| | | | | |